
ಗೊತ್ತಾಗುವುದು ಜಾರ್ಜ್ ದೂರದೂರಿನಲ್ಲಿರುವ ಆತನ ತಾಯಿಯನ್ನು ನೋಡಲು ಹೋದಾಗ. ಸಾವಕಾಶವಾಗಿ ತಾಯಿಯ ಜೊತೆ ಮಾತನಾಡುತ್ತಾ ತನ್ನ ಕನಸಲ್ಲಿ ಆಗಾಗ ಮಜಿದ್ ಬರುತ್ತಾನೆ ಎನ್ನುತ್ತಾನೆ. 'ಯಾರು ಆ ಮಜೀದ್?' ಎಂದು ಕೇಳುತ್ತಾಳೆ ತಾಯಿ. 'ಮಜಿದ್, ನಾನು ಚಿಕ್ಕವನಾಗಿದ್ದಾಗ ನಮ್ಮ ಮನೆಯಲ್ಲಿ ಕೆಲಸಕ್ಕಿದ್ದನಲ್ಲ, ಅರಬ್ಬಿ, ಅವನ ಮಗ...' ಎನ್ನುತ್ತಾನೆ. ಯಾವುದೂ ತನಗೆ ನೆನಪಾಗುತ್ತಿಲ್ಲ ಎನ್ನುವ ತಾಯಿ ಮಾತನ್ನು ಮತ್ತೆಡೆಗೆ ಸರಿಸುತ್ತಾಳೆ. ತಮ್ಮ ಮನೆಗೆ ಬರುತ್ತಿರುವ ವಿಡಿಯೊ ಕ್ಯಾಸೆಟ್ ಮತ್ತು ಡ್ರಾಯಿಂಗ್‌ಗಳ ವಿಷಯವನ್ನು 'ಮುಚ್ಚಿಟ್ಟು' ಬೇರೇನೊ ಮಾತನಾಡಿ ಜಾರ್ಜ್ ಮಾರನೇ ದಿನ ಹೊರಡುತ್ತಾನೆ. ಆ ರಾತ್ರಿಯೂ ಬಾಲಕನೊಬ್ಬ ಕೊಡಲಿ ಎತ್ತಿಕೊಂಡು, ರಕ್ತ ಉಗುಳುತ್ತಾ ಇವನತ್ತ ಜೋರಾಗಿ ಬರುತ್ತಿರುವಂತೆ ಕಂಡು ಕನಸಿನಿಂದ ಧಡಕ್ಕನೆ ಏಳುತ್ತಾನೆ. ಬೆವರು ಸುರಿಸುತ್ತಾ ಭಯಗೊಂಡು ತತ್ತರಿಸುತ್ತಾನೆ.



ನಿರ್ದೇಶಕ ಮೈಖೇಲ್ ಹನೆಕೆ

ವಾಪಸ್ ಪ್ಯಾರಿಸ್‌ಗೆ ಬಂದಾಗ ಮತ್ತೊಂದು ಕ್ಯಾಸೆಟ್ ಅವನಿಗಾಗಿ ಕಾಯುತ್ತಿರುತ್ತದೆ. ಆ ವಿಡಿಯೊದ ಮೂಲಕ ತಾನು ಅನುಮಾನಿಸಿದ ಮಜಿದ್‌ನನ್ನು ಕಂಡುಹಿಡಿಯುತ್ತಾನೆ. ಆದರೆ ಜಾರ್ಜ್‌ನ ಮಾತುಗಳನ್ನು ಮಜಿದ್ ಒಪ್ಪುವುದಿಲ್ಲ, ತಾನು ಯಾಕಾಗಿ ವಿಡಿಯೊ ಮಾಡಬೇಕು? ಕೇಳುತ್ತಾನೆ. ಕತೆಯ ಸಂಘರ್ಷ ಹೀಗೆ ಮುಂದುವರೆದು ಕೊನೆಯಲ್ಲಿ ಮಜಿದ್ ತನ್ನ ಕತ್ತನ್ನು ಕುಯ್ದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಇದನ್ನು ಊಹಿಸಿರದ ಜಾರ್ಜ್ ಗಲಿಬಿಲಿಗೊಂಡು ನಿಲ್ಲುತ್ತಾನೆ. ಕತೆಯ ಕೊನೆಯಲ್ಲೂ ನಮಗೆ ಕ್ಯಾಸೆಟ್ ಕಳುಹಿಸುತ್ತಿರುವುದು ಯಾರೆನ್ನುವುದು ಗೊತ್ತಾಗುವುದೇ ಇಲ್ಲ. ಇಲ್ಲೇ ಕೆಚೆ ಭಿನ್ನವಾಗಿ ನಿಲ್ಲುವುದು.

ಮಾಮೂಲಿ ವ್ಯಾಪಾರಿ ಸಿನಿಮಾಗಳಲ್ಲಿನ ಅಥವಾ ಹಾಲಿವುಡ್ ಥ್ರಿಲ್ಲರ್ ಸಿನಿಮಾಗಳಲ್ಲಿ ಇರುವ ಥ್ರಿಲ್ಲರ್ ಅಂಶಗಳು ಯಾವೂ ಈ ಚಿತ್ರದಲ್ಲಿ ಕಾಣುವುದಿಲ್ಲ. ಕತೆಯ ಜೊತೆಗೆ ಸಾಗುತ್ತಾ ನಮ್ಮ ಕುತೂಹಲವನ್ನು ದುಪ್ಪಟ್ಟುಗೊಳಿಸುವ ವ್ಯಾಪಾರೀ ತಂತ್ರಗಳ್ಯಾವವೂ ಇಲ್ಲಿ ಇಲ್ಲ! ಕುತೂಹಲವನ್ನು ಬೇಕೆಂತಲೇ ಮುರಿದು ಹಾಕುವ ಈ ಚಲನಚಿತ್ರದ ಬಹುತೇಕ ದೃಶ್ಯಗಳು ನಮಗೆ ಕೆಲವೊಮ್ಮೆ ಕಿರಿಕಿರಿಮಾಡಿ ಕತೆಯ ಪಾತ್ರಗಳೊಂದಿಗೆ ತನ್ಮಯರಾಗದೆ, ಕತೆಯೊಂದಿಗೆ ಒಂದು ನಿರ್ದಿಷ್ಟ ಅಂತರವನ್ನು ಕಾಯ್ದುಕೊಂಡು ನಾವು ನೋಡುತ್ತಿರುವುದು ಒಂದು ಚಲನಚಿತ್ರ ಎಂಬುದನ್ನು ನೆನಪಿಸಲೆಂದೇ ಕೆಚೆ ಈ ಬಗೆಯ ಹಾದಿಯನ್ನು ಹಿಡಿಯುತ್ತದೆ. ನವ್ಯೋತ್ತರ ನಾಟಕ–ಸಿನಿಮಾ–ಗದ್ಯದ ನಿರೂಪಣಾ ಶೈಲಿ ಇದು. ಸಾಂಪ್ರದಾಯಿಕ ನೋಡುಗ ಶೈಲಿಗೆ ವಿರುದ್ಧವಾದುದು. ಇಂತಹ ಶೈಲಿಯ ವೈಶಿಷ್ಟ್ಯವೇನೆಂದರೆ ಕತೆಯ ಜೊತೆ ನೋಡುಗರು ಸಂವಾದ ಬೆಳೆಸಿಕೊಳ್ಳಬೇಕು, ಕತೆ ಕಟ್ಟುವಿಕೆಯಲ್ಲಿ ಪಾಲುದಾರರಾಗಬೇಕು ಮತ್ತು ನೋಡುತ್ತಿರುವ ಸಿನಿಮಾದ ಆಚೆ ನಿಂತು ಸಿನಿಮಾದೊಳಕ್ಕೆ ಪ್ರವೇಶಿಸಬೇಕು ಎನ್ನುವುದೇ. ಈ ಸಿನಿಮಾದಲ್ಲಿ ಬರುವ ದೃಶ್ಯಗಳು ಫೋಟೊಗಳೇ ಅಥವಾ ನಾವು ನೋಡುತ್ತಿರುವ ವಿಡಿಯೊ ನಿಂತು ಹೋಗಿದೆಯೇ ಎಂದು ಪರೀಕ್ಷಿಸಿಕೊಳ್ಳುವಂತೆ ಮಾಡುವ ಕೆಚೆ (ಹನೆಕೆಯ ಬಹುತೇಕ ಚಿತ್ರಗಳಂತೆ) ಕೆಲವೊಮ್ಮೆ ಕಿರಿಕಿರಿಯುಂಟು ಮಾಡುತ್ತದೆ. ಇದರ ಮೂಲಕ ಕತೆಯೊಳಗಿನ ಥ್ರಿಲ್ಲರ್ ಅಂಶಗಳಿಗೆ ನಮ್ಮನ್ನು ನಾವು ಸಮರ್ಪಿಸಿಕೊಳ್ಳದಂತೆ ಎಚ್ಚರಿಸುತ್ತದೆ. ಕತೆಯ ಹೊರಗೆ ನಿಂತೇ ಕತೆಯನ್ನು 'ಫಾಲೊ'